ಶ್ರೀ ಜಿ.ಹೆಚ್. ಅಶ್ವತ್ಥರೆಡ್ಡಿ (ಲೋಕೋಪಯೋಗಿ ಸಚಿವರು) : ಮಾನ್ಯ ಅಧ್ಯಕ್ಷರೇ, ಮೇಲ್ಕಂಡ ಸೂಚನೆಗೆ ಈ ಕೆಳಕಂಡ ಲಿಖಿತ ಹೇಳಿಕೆ ನೀಡಲು ತಮ್ಮ ಅನುಮತಿ ಕೋರುತ್ತೇನೆ.

ಈ ವಿಷಯವು ಸರ್ಕಾರದ ಗಮನಕ್ಕೆ ಬಂದಿದೆ. ಬೆಂಗಳೂರು ನಗರ, ಗಾಂಧೀನಗರ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಆನಂದರಾವ್ ವೃತ್ತದ ಬಳಿ ಸುಬೇದಾರ್ ಛತ್ರಂ ರಸ್ತೆಗೆ ಹೊಂದಿಕೊಂಡಂತೆ ಒಂದು ಪೋಲೀಸ್ ಕಾಲೋನಿ ಇದೆ. ಇದನ್ನು 1975ನೇ ಇಸವಿಯಲ್ಲಿ ಅಂದರೆ, ಸುಮಾರು 17 ವರ್ಷಗಳ ಹಿಂದೆ ನಿರ್ಮಿಸಿರುತ್ತಾರೆ. ಇಲ್ಲಿ 252 ಪೋಲೀಸ್ ಕಾನ್ಸ್‌ಟೇಬಲ್‌ಗಳ ಹಾಗೂ 3 ವರ್ಷಗಳ ಹಿಂದೆ ಕಟ್ಟಿದ 12 ಸಬ್ ಇನ್ಸ್‌ಪೆಕ್ಟರ್‌ಗಳ ವಸತಿ ಗೃಹಗಳು ಇವೆ. ಇಲ್ಲಿ 2 ಕಿ.ಮೀ. ಉದ್ದ ಇರುವ ರಸ್ತೆಗಳನ್ನು ಸುಮಾರು 15 ವರ್ಷಗಳ ಹಿಂದೆ ನಿರ್ಮಿಸಿದ್ದು, ಇದಕ್ಕೆ ಡಾಂಬರನ್ನೂ ಸಹ ಹಾಕಿರುತ್ತಾರೆ. ಈ ರಸ್ತೆಗಳ ದುರಸ್ತಿ ಮಾಡದೇ ಇರುವುದರಿಂದ ಅಲ್ಲಲ್ಲಿ ಗುಂಡಿಗಳು ಬಿದ್ದು ಜನರ ಹಾಗೂ ವಾಹನ ಸಂಚಾರಕ್ಕೆ ತೊಂದರೆ ಕಂಡು ಬಂದಿದೆ. ಹಾಗೆಯೇ ಬೀದಿ ದೀಪಗಳ ದುರಸ್ತಿ ಮಾಡಬೇಕಾಗಿದೆ. ಇದನ್ನು ಗಮನಿಸಿ, ಸದರೀ ಕಾಲೋನಿಯ ರಸ್ತೆ ಹಾಗೂ ದೀಪಗಳ ದುರಸ್ತಿಗೆ ರೂ. 2.10.000 ಗಳ ಅಂದಾಜನ್ನು ತಯಾರಿಸಲಾಗಿದೆ. ಸಾಕಷ್ಟು ಅನುದಾನ ಈ ಸಾಲಿನಲ್ಲಿ ಲಭ್ಯವಿಲ್ಲದೇ ಇರುವುದರಿಂದ ಈ ಸಾಲಿನಲ್ಲಿ ದುರಸ್ತಿ ಕಾರ್ಯವನ್ನು ತೆಗೆದುಕೊಳ್ಳಲಾಗಲಿಲ್ಲ. ಸದರೀ ಕೆಲಸವನ್ನು ಅನುದಾನದ ಲಭ್ಯತೆ ಮೇಲೆ ಮುಂದಿನ ಸಾಲಿನಲ್ಲಿ (1992-93) ತೆಗೆದುಕೊಳ್ಳಲಾಗುವುದು.

3. ಮಂಗಳೂರು ತಾಲ್ಲೂಕು ಉಳ್ಳಾಲವನ್ನು ಪುರಸಭೆಯನ್ನಾಗಿ ಪರಿವರ್ತಿಸುವ ಬಗ್ಗೆ.

ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ) : ಮಾನ್ಯ ಅಧ್ಯಕ್ಷರೇ, ಮಂಗಳೂರು ತಾಲೂಕಿನ ಉಳ್ಳಾಲ ಮಂಡಲ್ ಪಂಚಾಯಿತಿಯು 34 ಸಾವಿರಕ್ಕೂ ಮಿಕ್ಕಿದ ಜನಸಂಖ್ಯೆಯ ಊರು. ಈ ಗ್ರಾಮದ ಅಭಿವೃದ್ಧಿ, ಬೆಳವಣಿಗೆಯ ದೃಷ್ಟಿಯಿಂದ ಉಳ್ಳಾಲದಲ್ಲಿ ಮಂಡಲ ಪಂಚಾಯತ್ ರದ್ದುಪಡಿಸಿ, ಪುರಸಭೆಯನ್ನಾಗಿ ಪರಿವರ್ತನೆ ಮಾಡುವುದು ತುಂಬಾ ಹಿತಕರವಾಗಿದೆ.

ಆದಕಾರಣ 34 ಸಾವಿರದಷ್ಟು ಜನಸಂಖ್ಯೆ ಇರುವ ಉಳ್ಳಾಲವನ್ನು ಪುರಸಭೆಯಾಗಿ ಮಾರ್ಪಡಿಸಬೇಕಾದುದು ಅತೀ ಅವಶ್ಯಕವಾಗಿರುತ್ತದೆ. ಈ ಕುರಿತು ಗ್ರಾಮಾಭಿವೃದ್ಧಿ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಧರ್ಮಸಿಂಗ್ (ಗೃಹ ಮತ್ತು ಜೈಲ್ಸ್ ಸಚಿವರು) : ಮಾನ್ಯ ಅಧ್ಯಕ್ಷರೇ, ಮಾನ್ಯ ಇದಿನಬ್ಬ ಅವರ ಸೂಚನೆಯನ್ನು ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರ ಗಮನಕ್ಕೆ ತಂದು ಉತ್ತರ ತರಿಸಿಕೊಡುತ್ತೇನೆ.

4. ಹನುಮನಳ್ಳಿ ಏತ ನೀರಾವರಿ

ಶ್ರೀ ಕೆ.ಎಚ್. ಹನುಮೇಗೌಡ : ಮಾನ್ಯ ಅಧ್ಯಕ್ಷರೇ ಹಾಸನ ಕ್ಷೇತ್ರದ ಕಟ್ಟಾಯ ಮತ್ತು ಶಾಂತಿಗ್ರಾಮದ ಹೋಬಳಿಗಳು ಆಗಾಗ್ಗೆ ಬರಗಾಲಕ್ಕೆ ತುತ್ತಾಗುತ್ತಿದ್ದು ಬರಗಾಲದ ಬವಣೆಯಿಂದ ಅರ್ಧಾಗ್ಯ ಜನರನ್ನು ರಕ್ಷಿಸಲು ಸರ್ಕಾರ ಪ್ರತಿ ವರ್ಷ ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡುತ್ತಿದೆ. ಹಾಸನ ಕ್ಷೇತ್ರದಲ್ಲಿ ಹೇಮಾವತಿ ಡ್ಯಾಮ್‌ನ್ನು ಕಟ್ಟಿದ್ದು ಸಾವಿರಾರು ಎಕರೆಗಳು ಮುಳುಗಡೆಯಾಗಿದ್ದರೂ ಈ ತಾಲ್ಲೂಕಿಗೆ ಆಗಾಗ್ಗೆ ಬರಗಾಲಕ್ಕೆ ತುತ್ತಾಗುತ್ತಿರುವ ವಿಚಾರವನ್ನು ಈಗ್ಗೆ ಸುಮಾರು 8 ತಿಂಗಳ ಹಿಂದೆ ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ವಿಧಾನ ಸೌಧದ ಮೂರನೆಯ ಮಹಡಿ ಕಾನ್‌ಫರೆನ್ಸ್ ಹಾಲಿನಲ್ಲಿ ನಡೆದ ಶಾಸಕರ ಮತ್ತು ಇಂಜಿನೀಯರ್‌ಗಳ ಮೀಟಿಂಗ್‌ನಲ್ಲಿ ಇದನ್ನು ತಂದಾಗ ಹನುಮನಹಳ್ಳಿ

ಏತದ ನೀರಾವರಿ ಯೋಜನೆಯನ್ನು ಕಾರ್ಯಗತ ಮಾಡಿ ಹಾಸನ ತಾಲ್ಲೂಕಿನ ಬರಗಾಲಕ್ಕೆ ತುತ್ತಾಗುತ್ತಿರುವ ಪ್ರದೇಶಕ್ಕೆ ಶಾಶ್ವತ ಪರಿಹಾರ ಒದಗಿಸುವ ವಿಚಾರದಲ್ಲಿ ಭರವಸೆ ಕೊಟ್ಟಿದ್ದರು ಈ ಯೋಜನೆಯ ಅಂದಾಜು ಮತ್ತು ಪ್ಲಾನ್ ತಯಾರಾಗಿದ್ದು ಈ ಯೋಜನೆಯನ್ನು ತಕ್ಷಣ ಕಾರ್ಯಗತ ಮಾಡುವ ವಿಚಾರವನ್ನು ಮಾನ್ಯ ಭಾರಿ ನೀರಾವರಿ ಸಚಿವರ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು) : ದಿನಾಂಕ 9-4-1991ರಂದು ಸನ್ಮಾನ್ಯ ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಹಾಸನ ಜಿಲ್ಲೆಯ ಹನುಮನಹಳ್ಳಿ ಏತ ನೀರಾವರಿ ಯೋಜನೆಯನ್ನು ಪರಿಶೀಲಿಸಿ ಅನುಮೋದನೆ ನೀಡಬೇಕೆಂದು ನಿರ್ಧರಿಸಲಾಯಿತು. ಅದರಂತೆ. ಹೇಮಾವತಿ ಕೊಳ್ಳದಲ್ಲಿರುವ ನೀರಿನ ಲಭ್ಯತೆಯನ್ನನುಸರಿಸಿ 0.35 ಟಿ.ಎಂ.ಸಿ. ನೀರನ್ನು ಬಳಸುವ ಒಂದು ಯೋಜನೆಯನ್ನು ತಯಾರಿಸುವಂತೆ ತಾಂತ್ರಿಕ ಸಮಿತಿ ನಿರ್ಧಾರ ತೆಗೆದುಕೊಂಡಿತು.

ಈ ಯೋಜನೆಯ ಪೂರ್ವಭಾವಿ ತಪಾಸಣಾ ವರದಿಯನ್ನು ಈಗ ತಯಾರಿಸಲಾಗಿದೆ. ಮುಖ್ಯ ಇಂಜಿನಿಯರ್. ಸಣ್ಣ ನೀರಾವರಿ. ಇವರು ಎರಡು ಪರ್ಯಾಯ ಯೋಜನೆಗಳನ್ನು ಸರ್ಕಾರಕ್ಕೆ ಸಲ್ಲಿಸಿದ್ದಾರೆ. ರೂ. 6.00 ಕೋಟಿಯ ಒಂದು ಅಂದಾಜಿ ಪ್ರಕಾರ 6500 ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲು ಉದ್ದೇಶಿಸಲಾಗಿದೆ. ಈ ಪ್ರಸ್ತಾವೆಯಲ್ಲಿ ಆಗುವ ನೀರಿನ ಬಳಕೆ 0.65 ಟಿ.ಎಂ.ಸಿ. ಇನ್ನೊಂದು ಪರ್ಯಾಯ ಪ್ರಸ್ತಾವನೆಯ ಪ್ರಕಾರ ನೀರಾವರಿಯಾಗುವ ಪ್ರದೇಶ 9.600 ಎಕರೆ. ಇದರ ಅಂದಾಜು ರೂ. 10.75 ಕೋಟಿ ಮತ್ತು ನೀರಿನ ಬಳಕೆ 0.768 ಟಿ.ಎಂ.ಸಿ.

ಈ ಎರಡೂ ಪ್ರಸ್ತಾವೆಗಳಲ್ಲಿ ಆಗುವ ನೀರಿನ ಬಳಕೆ ತಾಂತ್ರಿಕ ಸಮಿತಿ ನಿರ್ಣಯಿಸಿರುವುದಕ್ಕಿಂತ ಹೆಚ್ಚಿರುವುದರಿಂದ. ಪುನಃ ಈ ಪ್ರಸ್ತಾವೆಗಳನ್ನು ತಾಂತ್ರಿಕ ಸಮಿತಿಯ ಮುಂದೆ ಮಂಡಿಸಿ ಅದರ ನಿರ್ಣಯದಂತೆ ಸಾಧುವಾದ ಯೋಜನೆಯನ್ನು ಕಾರ್ಯಗತಗೊಳಿಸಲು ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

5. ಚಿಕ್ಕಮಗಳೂರು ತಾಲ್ಲೂಕಿನ ಸಿರಿವಾಸ್ ಗ್ರಾಮದ ಆಸ್ಪತ್ರೆಯ ಕಟ್ಟಡ ಹಾಗೂ ಸಿಬ್ಬಂದಿಯ ನೇಮಕ

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಅಧ್ಯಕ್ಷರೇ ಚಿಕ್ಕಮಗಳೂರು ತಾಲ್ಲೂಕಿನ ಸಿರಿವಾಸ್ ಗ್ರಾಮದಲ್ಲಿ ಆರೋಗ್ಯ ಇಲಾಖೆಯಿಂದ 10 ಹಾಸಿಗೆಗಳ ಆಸ್ಪತ್ರೆಯ ಕಟ್ಟಡ ಕಾಮಗಾರಿಕೆ ಮುಕ್ತಾಯಗೊಂಡಿದೆಯೇ ಈ ಕಟ್ಟಡದ ಕಾಮಗಾರಿಕೆಯು ಕರ್ನಾಟಕ ಭೂ ಸೇನಾ ನಿಗಮದವರು ಪೂರ್ಣಗೊಳಿಸಿರುತ್ತಾರೆಯೇ? ಆಗಿದ್ದಲ್ಲಿ ಈ ಆಸ್ಪತ್ರೆಗೆ ಅವಶ್ಯಕವಾಗಿ ಬೇಕಾದ ವೈದ್ಯರು ದಾದಿಯರು ಮುಂತಾದ ಅವಶ್ಯಕ ಸಿಬ್ಬಂದಿಗಳ ನೇಮಕ ಮಾಡಬೇಕಾದುದು ಸರ್ಕಾರದ ಅವಶ್ಯ ಕೆಲಸ ಹಾಗಾಗಿ ಸಿಬ್ಬಂದಿ ನೇಮಕ ಮಾಡಲಾಗಿದೆಯೇ ಮಾಡಿದ್ದಲ್ಲಿ ಯಾವ ಯಾವ ಹುದ್ದೆಗಳಿಗೆ ನೇಮಕ ಮಾಡಲಾಗಿದೆ ಹುದ್ದೆವಾರು ವಿವರ ನೀಡುವುದು. ನೇಮಕ ಮಾಡಿದ್ದಲ್ಲಿ ಈಗ ಹಾಲಿ ಕಾರ್ಯನಿರ್ವಹಿಸುತ್ತಿದ್ದಾರೆಯೇ. ಈ ಪ್ರದೇಶದ ಜನರಿಗೆ ಇರುವ ಅಥವಾ ಸಿಗುತ್ತಿರುವ ಸೌಲಭ್ಯಗಳೇನು ಇವರ ಸಮಸ್ಯೆಗಳನ್ನು ಪರಿಹರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು.?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಸಚಿವರು) : ಮಾನ್ಯ ಅಧ್ಯಕ್ಷರೇ. ಮಾನ್ಯ ಸಗೀರ್ ಅಹಮದ್‌ರವರು ಚಿಕ್ಕಮಗಳೂರು ತಾಲ್ಲೂಕಿನ ಸಿರಿವಾಸ್ ಗ್ರಾಮದಲ್ಲಿ ಪ್ರಾಥಮಿಕ ಆರೋಗ್ಯ